# ಹೊಳಹು



## DIGITAL MAGAZINE

**SVVHSS MIYAPADAVU**
**P. O. Miyapadavu, Manjeshwar**
**Kasaragod- 671323**
**Phone: 04998- 252100**
**E Mail: 11010miyapadav@gmail.com**

# ಶುಭ ಸಂದೇಶ

ಇಂದಿನ ಆಧುನಿಕ ಯುಗದಲ್ಲಿ ಕಂಪ್ಯೂಟರ್ ಜ್ಞಾನ, ವಿಜ್ಞಾನ ವೇಗವಾಗಿ ಮುನ್ನಡೆಯುತ್ತಿರುವ ಈ ಕಾಲಘಟ್ಟದಲ್ಲಿ ನಾವು ಕೂಡಾ ಹಾಗೆಯೇ ಮುಂದೆ ಸಾಗಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ವಿದ್ಯಾಭ್ಯಾಸ ಇಲಾಖೆಯ ನಿರ್ದೇಶನಾನುಸಾರ ನಮ್ಮ ಶಾಲಾ ಲಿಟ್ಲ್ ಕೈಟ್ಸ್ ಕ್ಲಬ್ ನ ವಿದ್ಯಾರ್ಥಿಗಳು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಇನ್ನಷ್ಟು ಕ್ರಿಯಾಶೀಲ ರಾಗಿ ಮುನ್ನಡೆಯಬೇಕೆಂಬ ಯೋಜನೆಯಂತೆ ನೀವು ತಯಾರಿಸುತ್ತಿರುವ ಇ- ಮ್ಯಾಗಝಿನ್ ಉತ್ತಮ ವಾಗಿ ರೂಪುಗೊಳ್ಳಲಿ. ಈ ಮೂಲಕ ನಿಮ್ಮ ಜ್ಞಾನ ವು ಇನ್ನಷ್ಟು ವೃದ್ಧಿಸಲಿ ಹಾಗೂ ಜೀವನಪಥದಲ್ಲಿ ಯಶಸ್ಸು ನಿಮ್ಮದಾಗಲಿ ಎಂಬ ಶುಭಹಾರೈಕೆಗಳು.

**ಡಾ.ಜಯಪ್ರಕಾಶ್ ನಾರಾಯಣ. ತೊಟ್ಟೆತ್ತೋಡಿ**
**ಸಂಚಾಲಕರು, ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಶಾಲೆ**
**ಮೀಯಪದವು**

# ನಲ್ನುಡಿ

ಪ್ರೀತಿಯ ವಿದ್ಯಾ ರ್ಥಿಗಳೇ

ವಿದ್ಯಾ ರ್ಥಿ ಜೀವನ ಎಂಬುದು ಬದುಕಿನಲ್ಲಿ ಮರೆಯಲಾರದ ದಿನಗಳು. ಎಲ್ಲಾ ಬವಣೆಗಳನ್ನು ಮರೆತು, ಮೇಲು ಕೀಳುಗಳೆಂಬ ಭೇದವಿಲ್ಲದೆ ಒಡನಾಡಿನ ದಿನಗಳವು.ಶಾಲಾ ದಿನಗಳಲ್ಲಿ ಕಲಿಕೆಯ ಜೊತೆಗೆ ಕಲೆ,ಕ್ರೀಡೆಗಳಲ್ಲಿ ಭಾಗಿಯಾಗುವುದು ಬದುಕಿನ ಅವಿಸ್ಮರಣೀಯ ಭಾಗವಾಗಿ ಉಳಿಯುತ್ತದೆ. ವಿದ್ಯಾರ್ಥಿ ಜೀವನದ ನೆನಪುಗಳನ್ನು ಸದಾ ಹಚ್ಚ ಹಸಿರಾಗಿಸಬೇಕೆಂಬ ದೃಷ್ಟಿ ಯಲ್ಲಿ **'ಹೊಳಹು'**ಎಂಬ ಪುಟ್ಟ **ಇ-ಪತ್ರಿಕೆ** ತಯಾರಿಸುತ್ತಿದ್ದೇವೆ.

ಶಾಲಾ ಬದುಕಿನ ಹಲವು ವಿಚಾರಗಳು **ಇ-ಪತ್ರಿಕೆ**ಯಲ್ಲಿ ಮುದ್ರಿತವಾಗಿದೆ. ವಿಧ್ಯಾರ್ಥಿಗಳ ಅನೇಕ ನೆನಪುಗಳು ಅವರಲ್ಲಿ ಅಡಗಿರುವ ಪ್ರತಿಭೆಗಳು ಬೆಳಕಿಗೆ ಬರಲು ಈ **ಇ-ಪತ್ರಿಕೆ** ಪ್ರೇರಣೆಯಾಗಬಹುದು.ಭವಿಷ್ಯದ ಬದುಕಿನಲ್ಲಿ ರಚನಾತ್ಮಕವಾಗಿ ಸ್ಪಂದಿಸುವ ಮನೋಭಾವ ವಿಧ್ಯಾರ್ಥಿಗಳಲ್ಲಿ ಬೆಳೆಯಲಿ.ಸ್ಪರ್ಧಾತ್ಮಕ ಸಮಾಜದಲ್ಲಿ ಯಶಸ್ವಿಯಾಗಿ ಮುನ್ನುಗ್ಗುವ ಧೈರ್ಯ ಒದಗಲಿ ಎಂಬ ಹಾರೈಕೆಯೊಂದಿಗೆ ಈ **ಇ-ಪತ್ರಿಕೆ**ಯನ್ನು ನಿಮಗೆ ಒಪ್ಪಿ ಸುತ್ತಿದ್ದೇವೆ.

**ಎಸ್. ಗೋಪಾಲಕೃಷ್ಣ ಭಟ್**
**ಮುಖ್ಯೋಪಾಧ್ಯಾ ಯರು,ಶ್ರೀ ವಿದ್ಯಾ ವರ್ಧಕ ಹೈಯರ್**
**ಸೆಕೆಂಡರಿ ಶಾಲೆ**
**ಮೀಯಪದವು**

# ಆಶಯ ನುಡಿ

ವಿದ್ಯಾರ್ಥಿಗಳ ಸೃಜನಶೀಲತೆಯ ಪ್ರಾವೀಣ್ಯತೆಯನ್ನು ಅಳೆಯಲಿರುವ ಮಾನದಂಡವಾಗುತ್ತಿರುವ ಈ ಸಂಚಿಕೆಯು ಮಾಹಿತಿ ತಂತ್ರ ಜ್ಞಾನದ ಅಳವಡಿಯೊಂದಿಗೆ ಸಾಗುತ್ತಿ ರುವುದು ಶ್ರೀ ವಿದ್ಯಾ ವರ್ಧಕ ಪ್ರೌಢ ಶಾಲೆಯ ವಿದ್ಯಾ ರ್ಥಿಗಳ ಪಾಲಿಗೆ ವರದಾನವಾಗಲಿದೆ.ಕತೆ ,ಕವನ, ಲೇಖನ, ಚಿತ್ರಕಲೆ ,ಮುಂತಾದಬರವಣಿಗೆಗಳು ಇಲ್ಲಿ ಮೇಳೈಸಿವೆ. ತುಂಬು ಹೃದಯದ ಕೊಡುಕೊಳ್ಳುವಿಕೆಯ ಮೂಲಕ ಸಹೃದಯರಾದ ಓದುಗರು ವಿದ್ಯಾ ರ್ಥಿಗಳ ಈ ಕಿರು ಸಂಚಿಕೆಗೆ ಆಸರೆಯನ್ನು ನೀಡುವರೆಂಬ ಭರವಸೆಯೊಂದಿಗೆ ಆರಂಭದ ಈ ಕಿರು ಹೊಳಹು ಸಂಚಿಕೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ.

**ಸಂಪಾದಕರು**

# ಅಂತರಂಗ


| | | |
|---|---|---|
| 1. | ಅರ್ಕನ ಅಂದ | 6 |
| 2. | ನಮ್ಮ ಶಾಲೆ | 7 |
| 3. | ಚುಟುಕು | 8 |
| 4. | ಸಾಧನೆ | 9-10 |
| 5. | ಅಮ್ಮ | 11 |
| 6. | ಮುನಿದ ಪ್ರಕೃತಿ | 12 |
| 7. | ಚಂದಮಾಮ | 13 |
| 8. | ನದಿ | 14 |
| 9. | ಪಶ್ಚಾತಾಪ | 15-16 |
| 10. | ಕಟ್ಟೆಯ ಮೇಲಿದೆ ಸುಂದರ ಚಿಟ್ಟೆ | 17 |
| 11. | ವಿದ್ಯಾರ್ಥಿಗಳ ಮೇಲೆ ಮೊಬೈಲ್ ಪ್ರಭಾವ | 18-19 |
| 12. | ಅಮ್ಮ | 19 |
| 13. | ಹೆಣ್ಣು ಸಮಾಜದ ಕಣ್ಣು | 20 |
| 14. | ಸೇವೆ | 21-22 |
| 15. | ಸಾಧನೆ | 23-24 |
| 16. | ಯುದ್ಧದ ಪರಿಣಾಮಗಳು | 24-25 |
| 17. | ಬದುಕಿನ ಮಹತ್ವ | 26 |
| 18. | ಪ್ರಕೃತಿಯ ಶಾಪ | 27-28 |
| 19. | ದೂರವಾಗುವ ಸಮಯ | 29 |
| 20. | ವಿಸ್ಮಯ | 30 |
| 21. | ಆರೋಗ್ಯ | 32 |
| 22. | പ്രളയം | 33 |
| 23. | Friend | 34 |
| 24. | Festival | 34-35 |
| 25. | Mother Call | 36 |
| 26. | ಬಣ್ಣ | 37 |

# ಅರ್ಕನ ಅಂದ

ತಿಳಿ ಮುಗಿಲು ಕರೆಯುತಿದೆ
ಬಾ ಎಂದು ಅರ್ಕನನು
ಕರಿ ಮೋಡ ಇಣುಕುತಿದೆ
ದೂರ ಸರಿ ಎಂದೂ
ತಂಬೆಲರು ಸೆಳೆಯುತಿದೆ
ಅಣ್ಣಾ  ಎಂದೆಲ್ಲರನ್ನು
ದೀಪಲಿ ಕಾಣುತಿದೆ
ಸರ್ವ ಬೆಳಕು
ಭುವಿ ಬಾನು ನೀಡುತಿದೆ
ಏಕತೆಯ ಸಾರುವನು
ಕೈ ಬೀಸಿ ಕರೆಯುತಿದೆ
ಸಪ್ತ ವಾರಿಧಿಯು

**ಸಾವಿತ್ರಿ .ಎಮ್**
**ಕನ್ನಡ ಅಧ್ಯಾಪಿಕೆ**

# ನಮ್ಮ ಶಾಲೆ

ಪೊರ್ಲ್ ಡ್ ಪೊರ್ಲ್ ಪೊರ್ಲ್ ಯೇ ನಮ್ಮ ಶಾಲೆ
ಎನ್ಮ್ರೆದ್ ಪ್ಲಸ್ ಟು ಕಲ್ ಪೆರೆ ನಮ್ಮ ಶಾಲೆ
ಶ್ರೀ ವಿಧ್ಯಾ ವರ್ಧಕ ಹೈಯರ್ ಸೆಕೆಂಡರಿ ಶಾಲೆಗೆ
ಮೀಯಪದವು ಉಂಡು ನಮ್ಮ ಈ ಒಂಜಿ ಪೊರ್ಲ್ ಶಾಲೆಗೆ
ಜಾತಿ ಬೇಧ ಮೂಲಿಜ್ಜಿ ಯೇ
ನಮ ಒಂಜೆ ಶಾಲೆದ ಜೋಕುಲುಯೇ
ಗುರುಕುಲ ಮನಸ್ ಬಂಗಾರ್ ಯೇ
ಅಕಲ್ ಪನ್ ಪಿನ ಪಾಠ ಅರ್ಥಪುಡುಂಗೆ
ನಮ್ಮ ಶಾಲೆಲಾ ಪೊರ್ಲು
ನಮ್ಮ ಪಾಠಲಾ ಪೊರ್ಲು
ನಮ್ಮ ಬದ್ ಕ್ ಲಾ ಪೊರ್ಲು
ನಮ್ಮ ಜೀವನ ಪೊರ್ಲು
ಪೊರ್ಲು ಶಾಲೆ ಪನ್ ಲೆ ಪೂರಾ..........
ಪುಣ್ಯ ಪುರುಷೆರ್ ಕಲ್ತ್ ದ್  ಪೊಯಿನ
ನಮ್ಮ ಈ ಪೊರ್ಲು ಶಾಲೆ
ಕನ್ನಡ ಮೀಡಿಯಂ ಇಂಗ್ಲೀಷ್ ಮೀಡಿಯಂ
ಕಲ್ ಪೆರೆ ನಮ್ಮ ಶಾಲೆ
ನಮ್ಮ ಒಗ್ಗಟ್ಟು ಪೊರ್ಲು
ನಮ್ಮ ದೊಸ್ತಿಲಾ ಪೊರ್ಲು
ನಮ್ಮ ಸ್ಪೋಟ್ಸ್  ಲಾ ಪೊರ್ಲು
ನಮ್ಮ ಕಲೋತ್ಸನ ಪೊರ್ಲು
ಬಲೇ ಬಲೇ ಜೋಕುಲೇ........

**ಆದಿಶ್ರೀ ಎಸ್.ಎನ್ ,X C**

# ಚುಟುಕು

ಕುಳಿತೆ ನಾ ಕವನ ಬರೆಯುತ್ತಾ
ನನ್ನ ಮನ ಸೆಳೆಯಿತು ಕಾಗೆಯತ್ತಾ
ನಾನು ಕುಳಿತೆ ಅದನ್ನೇ ನೋಡುತ್ತಾ
ಕವನ ಬರೆಯುವುದನ್ನು ಮರೆಯುತ್ತಾ

ನಾನು ಮಾಡಿದೆ ಗೆಳೆತನ
ಒಬ್ಬನ ಮೇಲಿತ್ತು ಹಗೆತನ
ಸೇಡು ತೀರಿಸಲು ಹೋದೆ ನಾ
ಇಂಗು ಗುಂಡಿಗೆ ಬಿದ್ದೆ ನಾ

ಕ್ಲಾಸಿನಲ್ಲಿದ್ದಾನೆ ಆರೀಪು
ಅವನನ್ನು ಕರಿತಾರೆ ಪಾಪು
ಅವನಿಗೆ ಹಾಕುತ್ತಾರೆ ಸೋಪು
ಅವನಲ್ಲಿದೆ ಒಂದು ಜೀಪು

**ಆದಿಶ್ರೀ.ಎಸ್ .ಎನ್, X C**



# ಸಾಧನೆ

ಹಚ್ಚ ಹಸಿರಿನಿಂದ ಕೂಡಿದ ಗುಡ್ಡ ಬೆಟ್ಟಗಳ ಸಾಲು. ಹಕ್ಕಿಗಳ ಕಲರವ. ದಟ್ಟವಾಗಿ ಬೆಳೆದ ಗುಡ್ಡಬೆಟ್ಟಗಳು. ಹಚ್ಚ ಹಸಿರಿನ ಗಿಡಮರ.ಈ ಕಣ್ಮನ ಸೆಳೆಯುವ ಕಾಡಿನ ದೃಶ್ಯವನ್ನು ಚಿತ್ರಿಸುತ್ತಿರುವ ಓರ್ವ ಗಂಡಸು.ನೋಡಿದರೆ ಯಾರೋ ಸಜ್ಜನರಂತೇ ಕಾಣುತ್ತಾರೆ."ವಾವ್ ವಾಟ್ ಎ ಬ್ಯೂಟಿಫುಲ್ ಸೀನರಿ" ಎಂದು ಜೋರಾಗಿ ಬೊಬ್ಬಿ ಡುತ್ತಾನೆ. ಅಷ್ಟಕ್ಕೂ ಈ ಗಂಡಸು ಯಾರೆಂದರೆ ಓರ್ವ ಸಿನೆಮಾ ನಿರ್ದೇಶಕ.ತನ್ನ  ಸಿನೆಮಾಕ್ಕೋಸ್ಕರ ಒಂದೊಲ್ಲೆ ಜಾಗ ನೋಡಲು ಬಂದಿದ್ದ. ಹೀಗೆ ಎಲ್ಲಾ ದೃಶ್ಯದ ಚಿತ್ರವನ್ನು ತೆಗೆಯುತ್ತಾ ಮುಂದೆ ಹೋಗುತ್ತಿದ್ದಾಗ ಕಾಡಲ್ಲಿ ಅಳೆದಾಡುತ್ತಿದ್ದ ಕರಡಿ ಅವನ ಮೇಲೆ ದಾಳಿ ಮಾಡಲು ಬರುತ್ತದೆ.ಆಗ ಅವನು ಓಡಿ ಓಡಿ ಕೊನೆಗೆ ಯಾವುದೋ ಒಂದು ಮರದ ತುಂಡು ಕಾಲಿಗೆ ಸಿಲುಕಿ ಅಲ್ಲೇ ಬಿದ್ದ.ಕರಡಿ ಅವನ ಬಳಿ ಬಂದು ಬಿಟ್ಟಿತು. ಆಗ ಅವನು ಜೋರಾಗಿ ಬೊಬ್ಬೆ ಹೊಡೆದ. ಆಗ ಅಲ್ಲೇ ಕಟ್ಟಿಗೆ ಕಡಿಯುತ್ತಿದ್ದ ರಾಮಪ್ಪ ಬೊಬ್ಬೆ ಕೇಳಿದ ಜಾಗಕ್ಕೆ ಓಡಿ ಬಂದ.


ಆಗ ಅಲ್ಲಿ ಕರಡಿ ನಿರ್ದೇಶಕನ ಮೇಲೆ ದಾಳಿ ಮಾಡುತ್ತಿತ್ತು. ರಾಮಪ್ಪ ಅಲ್ಲೇ ಇದ್ದ ದೊಡ್ಡ ಕಟ್ಟಿಗೆ ತೆಗೆದು ಕರಡಿಯ ತಲೆಗೆ ೧ ಏಟು ಹೊಡೆದ. ಕರಡಿ ಅಲ್ಲಿಯೇ ಉರುಳಿ ಬತ್ತು. ರಾಮಪ್ಪ ಗಾಯಗೊಂಡ ನಿರ್ದೇಶಕನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ನಿರ್ದೇಶಕನಿಗೆ ಪ್ರಜ್ಞೆ ತಪ್ಪಿತ್ತು. ರಾಮಪ್ಪ ಮನೆಯಲ್ಲಿ ಮಂಚದಲ್ಲಿ ಅವನನ್ನು ಕೂರಿಸಿ ಗಾಯಕ್ಕೆ ಮದ್ದು ಹಚ್ಚಿ ಅಲ್ಲೇ ಮಲಗಿಸಿದ.

ಬೆಳಗಾಯಿತು. ರಾಮಪ್ಪ ಮನೆಯಲ್ಲಿ ದನಕರುಗಳಿಗೆ ಹಲ್ಲು ಹಾಕುತ್ತಿದ್ದನು. ರಾಮಪ್ಪನ ಹೆಂಡತಿ ನೀರು ಸೇದುತ್ತಿದ್ದಳು.ಅವನ ಮಗಳು ಹಾಡು ಹಾಡುತ್ತಾ ದೇವರಿಗೆ ದೀಪ ಹಚ್ಚುತ್ತಿದ್ದಳು.ಆಗ ಹಾಡು ಕೇಳಿ ನಿರ್ದೇಶಕನಿಗೆ ಎಚ್ಚರವಾಯಿತು. ಅದನ್ನು ಕಂಡ ರಾಮಪ್ಪ ಓಡಿ ಅವನ ಬಳಿ ಬಂದು ವಿಚಾರಿಸಿದ.'ಈಗ ಹೇಗಿದ್ದೀರಿ'. 'ಪರವಾಗಿಲ್ಲ' ಎಂದು ನಿರ್ದೇಶಕ ಹೇಳಿದ. ಆಗ ರಾಮಪ್ಪ 'ನಿಮ್ಮ ಹೆಸರೇನು' ಆಗ ಶರತ್ ಎಂದು ಹೇಳಿದ. 'ಅದು ಸರಿ...ನೀವು ಈ ಕಾಡಲ್ಲಿ ಏನು ಮಾಡತ್ತಿದ್ದೀರಿ' ಎಂದು ರಾಮಪ್ಪ ಕೇಳಿದ. 'ನಾನೊಬ್ಬ ಸಿನಿಮಾ ನಿರ್ದೇಶಕ. ಸಿನಿಮಾದ ಶೂಟಿಂಗ್ ಗೆ ಸ್ಥಳ ಹುಡುಕಲು ಬಂದಿದ್ದೆ'. ಎಂದು ಹೇಳಿದ. 'ಈಗ ಒಬ್ಬಳು ಹುಡುಗಿ ಹಾಡಿದ್ಳಲ್ಲ ಅದು ಯಾರು' ಎಂದು ಶರತ್ ಕೇಳಿದ. ರಾಮಪ್ಪ 'ಅವಳು ನನ್ನ ಮಗಳು ಕವನ 'ಅಂದನು. ಶರತ್ 'ನಿಮ್ಮ ಮಗಳೇ ಅವಳು ಬಹಳ ಚೆನ್ನಾಗಿ ಹಾಡುತ್ತಾಳೆ. ನಾನೊಂದು ಸಿನಿಮಾ ಮಾಡುತ್ತಿದ್ದೇನೆ. ನಿಮ್ಮ ಮಗಳನ್ನು ನನ್ನ ಜೊತೆ ಕಳುಹಿಸಿ

ಕೊಟ್ಟರೆ ನನ್ನ ಸಿನಿಮಾದಲ್ಲಿ ಹಾಡಲು ಆವಕಾಶ ಕೊಡುತ್ತೇನೆ'.ರಾಮಪ್ಪ 'ಇಲ್ಲ ಸ್ವಾಮಿ ನಾವು ಬಡವರು ನಮಗೆಲ್ಲ ಸಿನಿಮಾ ಗಿನಿಮಾ ಹಿಡಿಸಲಿಕ್ಕೆ ಇಲ್ಲ'. 'ಯಾರು ಹೇಳಿದ್ದು ಹಾಗಂತ ಪ್ರಯತ್ನ ಮಾಡಿದರೆ ಯಾವುದು ಕಷ್ಟ ಅಲ್ಲ' . 'ಹಾಗಲ್ಲ ಸ್ವಾಮಿ ನಮಗೆ ಇರೋ ಒಬ್ಬ ಮಗಳು ಅವಳನ್ನು ಕಳಿಸಿಕೊಡಿ ಅಂದರೆ. ಊರು ಊರಲ್ಲಿ ಹಾಡು ಹಾಡುತ್ತಾ ಸ್ವಲ್ಪ ದುಡ್ಡು ಸಂಪಾದನೆ ಮಾಡುತ್ತಾ ಇದ್ದೀವಿ. ಅದಕ್ಕೂ ನೀವೂ ಕನ್ನ ಹಾಕಬೇಡಿ'.ಆಗ ಶರತ್ 'ಅಯ್ಯೋ ಸರ್ ನೀವೂ ತಪ್ಪು ತಿಳಿದುಕೊಂಡಿದ್ದೀರಾ ಕವನ ನನ್ನ ಜೊತೆ ಬಂದು ಹಾಡಿದ್ರೆ ಅವಳು ಪ್ರಸಿದ್ಧಳಾಗುತ್ತಾಳೆ. ಪ್ಲೀಸ್ ಒಪ್ಪಿ ಕೊಳ್ಳಿ' .ರಾಮಪ್ಪ ಒಲ್ಲದ ಮನಸ್ಸಿನಿಂದ ಒಪ್ಪಿ ಕೊಂಡ. ಕವನ ಒಮ್ಮೆ ಹೋಗಲು ಹಿಂಜರಿದಳು. ತಂದೆ ಒತ್ತಾಯಕ್ಕೆ ಮನಿದು ಹೊರಟಳು. ಶರತ್ ಕವನ ಬೆಂಗಳೂರಿಗೆ ಹೋಗಿ ಅಲ್ಲಿ ಸ್ಟುಡಿಯೋದಲ್ಲಿ ಹಾಡಿ

ಅವಳ ಹಾಡು ಪ್ರಸಿದ್ಧಿ ಪಡೆಯಿತು. ನಂತರ ಕವನ ದೊಡ್ಡ ದೊಡ್ಡ ಸಂಗೀತ ದಿಗ್ಗಜರ ಜೊತೆ ಹಾಡಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದಳು . ಬಯಸದೆ ಬಂದ ಭಾಗ್ಯದಿಂದ ಕವನಳ ಜೀವನವೇ ಬದಲಾಯಿತು.ಕವನ ತನ್ನ ಸಂಗೀತದ ಸಾಧನೆಯಿಂದ ದೇಶಕ್ಕೆ ಒಳ್ಳೆ ಯ ಕೀರ್ತಿ ತಂದಳು.

ಮಿಥಿಲ, **IX A**



# ಅಮ್ಮ

ಅಮ್ಮ ಅಮ್ಮ ನಮ್ಮಮ್ಮ
ನೀತಿಯ ಕಲಿಸುವ ನಮ್ಮಮ್ಮ
ಅಪ್ಪ ಅಪ್ಪ ನಮ್ಮಪ್ಪ
ಬುದ್ಧಿ ಯ ಹೇಳುವ ನಮ್ಮಪ್ಪ
ಅಜ್ಜಿ ಅಜ್ಜಿ ನಮ್ಮಜ್ಜಿ
ಮುತ್ತನು ಕೊಡುವ ನಮ್ಮಜ್ಜಿ
ಅಜ್ಜ ಅಜ್ಜ ನಮ್ಮಜ್ಜ
ಕತೆಯನು ಹೇಳುವ ನಮ್ಮಜ್ಜ
ಅಕ್ಕ ಅಕ್ಕ ನಮ್ಮಕ್ಕ
ಪಾಠವಾ ಕಲಿಸುವ ನಮ್ಮಕ್ಕ
ಅಣ್ಣ ಅಣ್ಣ ನಮ್ಮಣ್ಣ
ತಿಂಡಿಯ ತರುವ ನಮ್ಮಣ್ಣ
ತಂಗಿ ತಂಗಿ ನಮ್ಮತಂಗಿ
ತಿಂಡಿಯ ಕೇಳುವ ನಮ್ಮತಂಗಿ
ಮ್ಮ ತಮ್ಮ ನಮ್ಮತಮ್ಮ
ಆಟವ ಆಡುವ ನಮ್ಮತಮ್ಮ
ಅಮ್ಮ ಅಪ್ಪ ಅಜ್ಜಿ ಅಜ್ಜ
ಅಕ್ಕ ಅಣ್ಣ ತಂಗಿ ತಮ್ಮ
ಇದುವೇ ನಮ್ಮಯಾ
ಸಂಸಾರ ಸಂಸಾರ ಸಂಸಾರ...

**ಆದಿಶ್ರೀ ಎಸ್.ಎನ್, X C**

# ಮುನಿದ ಪ್ರಕೃತಿ

ಕಾಡು ವನ ಕಾನನ ಅಹ ಅದೆಷ್ಟು ಸುಂದರವಾಗಿದೆ
ಆದರೀಗ ಅದು ಮುನಿಸಿಕೊಂಡಿದೆ
ಬದುಕೆಂಬ ಹಾದಿಯಲಿ ಕಲ್ಲು ಮುಳ್ಳುಗಳು
ಆದರೀಗ ಬರಿ ಕಾಂಕ್ರಿಟು ಹಾಗೂ ಇಂಟರ್ ಲೋಕುಗಳು
ಆವತ್ತು ಗಿಡ ಮರ ಹಾಗೂ ಚಿಲಿಪಿಲಿ ಗುಟ್ಟುವ ಹಕ್ಕಿ
ಆದರೆ ಈಗ ನಾವು ಸೆಲ್ ಫೋನುಗಳಿಂದ
ಚಿಕ್ಕ ಪುಟ್ಟ ಪಕ್ಷಿ ಗಳನೆಲ್ಲವನು ಉಪಟಳ ನೀಡಿ
ಟವರ್ ಗಳಿಂದ ನಾಶಪಡಿಸಿದೆವು
ಈ ಪ್ರಕೃತಿಯು ನಾಶವಾಯಿತಂದಿನಿಂದ
ಪ್ಲಾ ಸ್ಟಿ ಕ್ ಹಾಗೂ ಇನ್ನಿತರ ವಸ್ತುವಿನಿಂದ

ಯಾವಾಗ ಪ್ಲಾ ಸ್ಟಿ ಕ್ ಉಪಯೋಗವಾಯಿತೋ
ಆವಾಗ ಪರಿಸರ ನಾಶವಾಯಿತೋ
ಸದ್ಯ ಸಂಭವಿಸಿದ ದುರಂತ ಕೇರಳದ ಸ್ಥಿತಿಯೋ
ಮುನಿದ ಪ್ರಕೃ ತಿಯ ಫಲಿತಾಂಶದ ಗತಿಯೋ
ನೆರೆ ಬಂದ ಅವಸ್ಥೆಯೋ ಮರುಗದು
ವರವೋ ಶಾಪವೋ ಇವತ್ತಿಗೂ ತಿಳಿಯದು

ವಿಷಭರಿತವಾದ ನೀರನ್ನು ಕುಡಿದು
ವಿಷಯುತವಾದ ಗಾಳಿಯನ್ನ ಸೇವಿಸಿ
ಕಾರ್ಖಾನೆಯ ನೀರು ಹಾಗೂ ವಾಹನಗಳ ಹೊಗೆ
ಯಿಂದಾಗಿ ನರಳಿ ನರಳಿ ಸಾಯುತ್ತಿದ್ದೇವೆ
ತ್ಯಾಜ್ಯ ಉಪಯೋಗ ಕಾರ್ಖಾನೆಯ ನೀರು
ವಾಹನಗಳ ಹೊಗೆ ಸೆಲ್ ಫೋನಿನ ಸ್ನಿಗಲ್ ಗಳಿಂದ
ಹಾಗೂ ಇನ್ನಿ ತರ ವೈವಾಹಿಕ ಉಪಯೋಗಗಳನ್ನು
ನಾವು ಪ್ರಕೃತಿಯನ್ನು ಮುಕ್ತಪಡಿಸುವ

**ಸುಶ್ಮಿತ, IX A**

# ಚಂದಮಾಮ

ಚಂದಮಾಮ ಚಂದಮಾಮ
ನೀನೆಷ್ಟು ಸುಂದರ
ಬೆಳದಿಂಗಳಲಿ ಪಳಪಳ ಹೊಳೆದು
ಮಕ್ಕಳು ನಗುತಿರಲು ಚಂದಮಾಮ
ಅಂಬರದಲಿ ತೇಲಾಡುವ ಬಟ್ಟಲು
ನೀನೇ.....ನೀನೇ.....ನೀನೇ.....
ಪಳಪಳ ಹೊಳೆಯುವ ಚಂದಿರನೇ
ರಾತ್ರಿಯಲಿ ತೇಲುವ ಮಾಮನೇ......
ಸೂರ್ಯನು ಹೊರಡಲು
ಚಂದ್ರನು ಬರುತಿರಲು
ಅಳುತಿಹ ಮಗುವಿಗೆ
ನಗುವನು ತೋರುವ ಚಂದಮಾಮ

**ಆದಿಶ್ರೀ ಎಸ್.ಎನ್, X C**



# ನದಿ

ನದಿಯೆ ನಿನ್ನ ಸೊಬಗ ನಾನು
ಮುದದಿ ನೋಡಿ ನಲಿಯುವೆ
ಎದೆಯ ಕೊಳದ ಕದವ ತೆರೆದು
ಸುಧೆಯ ನೀಂಟಿ ಹರಿಯುವೆ ॥

ಗುಡ್ಡ ಬೆಟ್ಟದಲ್ಲಿ ಜನಿಸಿ
ಒಡ್ಡ ಕಡೆಯನೆಲ್ಲ ಬಿಡಿಸಿ
ಗಿಡ್ಡ ರೂಪದಿಂದ ಸಾಗಿ
ದೊಡ್ಡ ನದಿಯೆ ಆಗುವೆ ॥

ಮುಂದೆ ಸಾಗಿ ಬಯಲು ಸೇರಿ
ಮಂದಗಮನ ಪಡೆಯುವೆ
ಕುಂದನೆಲ್ಲಾ ತೊಳೆದು ನೀನು
ಅಂದವಾಗಿ ಸಾಗುವೆ ॥

ಕೆಲದಿ ಬಲದಿ ಪೈರು ಪಚ್ಚೆ
ಹೊಲವ ಹಿಗ್ಗಿ ನೋಡುವೆ
ಹಲವ ತೊರೆಗಳೊಂದು ಗೂಡಿ
ಬಲವ ಹೊಂದಿ ಹರಿಯುವೆ ॥

ಭರದಿ ಹರಿದು ಕಡಲ ಸೇರಿ
ಒಡಲ ತುಂಬಿ ಮೊರೆಯುವೆ
ಇನಿಯ ಶರಧಿ ಮುದದಿ ನಗಲು
ಸನಿಹ ಸೇರಿ ನಾಚುವೆ ॥

**ದೀಕ್ಷಿತ ಡಿ.ಎನ್, X D**

# ಪಶ್ಚಾತ್ತಾಪ

ಮೋಹನನು ತನ್ನ ಕಾರನ್ನು ಒಂದು ಮಿಠಾಯಿ ಅಂಗಡಿಯ ಮುಂದೆ ನಿಲ್ಲಿಸಿದ್ದ. ಆ ಅಂಗಡಿಯಿಂದ ಅವನು ಮಗನಿಗೆ ಮಿಠಾಯಿಗಳನ್ನು ಖರೀದಿಸಲು ಅವನು ಕಾರಿನಿಂದ ಇಳಿದನು. ಅಂಗಡಿಯಲ್ಲಿ ಗಾಜಿನ ಕುಪ್ಪಿಗಳಲ್ಲಿ ಇಟ್ಟಿದ್ದ ಬಣ್ಣ-ಬಣ್ಣದ ಮಿಠಾಯಿಗಳನ್ನು ನೋಡಿದಾಗ ವೃದ್ಧಾಶ್ರಮದಲ್ಲಿದ್ದ ತನ್ನ ತಂದೆಯ ನೆನಪಾಯಿತು. ಆ ಮೋಹನನು ಚಿಕ್ಕ ವಯಸ್ಸಿನಲ್ಲಿರುವಾಗಾ ಅವನ ತಂದೆಯು ಇದೇ ರೀತಿಯ ಮಿಠಾಯಿಗಳನ್ನು ತಂದು ಕೊಡುತ್ತಿದ್ದರು. ಅವರಿಗೆ ಬರುವ ಸಂಬಳದಿಂದ ಅರ್ಧಭಾಗ ಮೋಹನನಿಗೆ ಎಂದು ಮೀಸಲಿಟ್ಟಿದ್ದರು. ಹೆಂಡತಿಯ ಫೋನ್ ಬಂದಾಗ ತನ್ನ ತಂದೆಯ ಯೋಚನೆಯಿಂದ ತಟ್ಟನೆ ಎಚ್ಚರಗೊಂಡನು .

"ಹಲೊ! ರೀ ನೀವು ಎಲ್ಲಿದ್ದೀರಾ?''

''ಆಫೀಸ್ ನಿಂದ ಬರುತ್ತಿದ್ದೇನೆ. ಯಾಕೆ?'' ಎಂದು ಮೋಹನನು ಮರು ಪ್ರಶ್ನಿ ಸಿದನು.

"ವೃದ್ಧಾಶ್ರಮ ದಿಂದ ಕೆಲವು ಮಂದಿ ಬಂದಿದ್ದಾರೆ. ನಿಮ್ಮ ಹತ್ತಿರ ಏನೋ ಮಾತನಾಡಬೇಕಂತೆ.''

''ಆಯ್ತು ಬಂದೆ'' ಮೋಹನನು ಅವನ ತಂದೆ ತಾಯಿಗೆ ಒಬ್ಬನೆ ಮಗನಾಗಿದ್ದ. ಅನರು ಅವನನ್ನು ತುಂಬಾ ಪ್ರೀತಿಯಿಂದ ಬೆಳೆಸಿದ್ದರು. ಮೋಹನನತಂದೆಯು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಅವರು ನಿವೃತಿ ಹೊಂದಿದ ಮೇಲೆ ಅವರು ಸಾಲ ತೆಗೆದುಕೊಂಡರು. ಅನಾರೋಗ್ಯದಿಂದಾಗಿ ಮೋಹನನ ತಾಯಿಯು ತೀರಿಹೋದಳು. ತನ್ನ ಪ್ರೀತಿಯ ಹೆಂಡತಿ ತೀರಿಹೋದ ಕಾರಣದಿದಾಗಿ ಇವನ ತಂದೆಯು ಕೆಲವು ರೋಗಗಳಿಗೆ ಒಳಗಾದರು. ಮೋಹನನು ದೊಡ್ಡವನಾಗಿ ಕೆಲಸಕ್ಕೆ ಸೇರಿ ಮದುವೆ ಮಾಡಿಕೊಂಡನು. ಅವನ ಸಂಬಳವು ತಂದೆಯ ಔಷದಿಗಳಿಗೆ ಖರ್ಚಾಗುತ್ತಿತ್ತು. ಇದರಿಂದ ಮೋಹನನು ತುಂಬಾ ಕೋಪಗೊಂಡಿದ್ದನು. ಇದೇ ಕೋಪದಲ್ಲಿ ಅವನು ತಂದೆಯನ್ನು ವೃದ್ಧಾಶ್ರಮಕ್ಕೆ ಕಲುಹಿಸಿದನು. ತಂದೆಗೆ ಒಳಗಿನಿಂದ ಬೇಸರವಿದ್ದರೂ ಹೊರಗಿನಿಂದ ಮುಗುಳು ನಗುತ್ತಿದ್ದರು.

ಮನೆಯ ಒಳಗೆ ಬಂದಾಗ ೧೦-೧೧ ಮಂದಿ ಒಳಗೆ ಕುಳಿತ್ತಿದ್ದರು. 'ಏನಾಯಿತು ಯಾಕೆ ಬಂದಿದ್ದೀರಿ?' ಎಂದು ಕೇಳಿದನು

''ಅದು .......ಅದು ನಿಮ್ಮ ತಂದೆ ವೃದ್ಧಾಶ್ರಮದಲ್ಲಿ ಕಾಣುತ್ತಿಲ್ಲ'' ಎಂದು ಅವರು ಹೇಳಿದರು. 'ಏನು' ಎಂದು ಆಶ್ಚರ್ಯಗೊಂಡನು. ನೀವೆಷ್ಟು ಬೇಜವಬ್ದಾರಿ ಹೇಗಾದಿರಿ? ನಿಮಗೆ ಅಷ್ಟು ಗೊತ್ತಿಲ್ಲವೆ ಅವರು ನನ್ನ ತಂದೆ ' ಎಂದು ಮೋಹನ ಕೋಪಗೊಂಡನು.

ಅವರು ನಿಮ್ಮ ತಂದೆ ಎಂದು ನೀವು ಅವರನ್ನು ವೃದ್ಧಾಶ್ರಮಕ್ಕೆ ಸೇರಿಸುವಾಗ ನೆನಪಿರಬೇಕಿತ್ತು. ಎಂದು ಹೇಳಿ ಹೊರಟು ಹೋದರು. ಮೋಹನನು ಸುಮ್ಮನಾದ. ಅವನು ಈ ಮಾತುಗಳಿಂದ ತುಂಬ ಕೊರಗಿದನು ಮತ್ತು ತನ್ನ ಸ್ವಾರ್ಥಕ್ಕಾಗಿ ತನ್ನ ತಂದೆಯನ್ನೆ ದೂರಮಾಡಿದೆ. ಎಂದು ಪಶ್ಚಾತ್ತಾಪ ಪಡುತ್ತಿದ್ದನ್ನು.

ಮೋಹನನ ತಂದೆಯು ಆಶ್ರಮವನ್ನು ಬಿಟ್ಟು ಪಕ್ಕದ ಊರಿನ ಜಮೀನ್ದಾರರ ಮನೆಯಲ್ಲಿ ಕೃಷಿ ಕಾಯಕದಲ್ಲಿ ತನ್ನನ್ನು ತೊಡಗಿಸಿ ಕೊಂಡಿದ್ದರು. ಇದರಿಂದ ಅವರಿಗೆ ನೆಮ್ಮದಿ ಸಿಗುತ್ತಿತ್ತು ಎಂದು ಮೋಹನನಿಗೆ ತನ್ನ ಗೆಳೆಯನಿಂದ ತಿಳಿದು ಬಂತು. ಮೋಹನನು ಕೂಡಲೆ ಜಮೀನ್ದಾರರ ಮನೆಗೆ ತೆರಳಿದನು. ಅಲ್ಲಿ ಅವನಿಗೆ ಅವನ ತಂದೆಯು ಕೃಷಿ ಕೆಲಸವನ್ನು ಮಾಡುವುದನ್ನು ನೋಡಿದಾಗ ಬೇಸರವಾಯಿತು. ಅವನು ಕೂಡಲೆ ತಂದೆಯಲ್ಲಿ ಬಂದು ತಪ್ಪಾಯಿತೆಂದು ಕ್ಷಮೆಯಾಚಿಸಿದನು. "ಅಪ್ಪಾ ನಾನು ತಿಮ್ಮನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದೆನೆ. ನನ್ನ ತಪ್ಪಾನ್ನು ಕ್ಷಮಿಸಿ ಅಪ್ಪಾ " ಎಂದು ಹೇಳುತ್ತಾ ಮೋಹನನು ಅತ್ತುಬಿಟ್ಟನು. ತಂದೆಯು "ಯಾವ ತಂದೆ ತಾಯಿಯು ತನ್ನ ಮಕ್ಕಳಿಗೆ ನೋವಾಗಬೇಕೆಂದು ಅಥವ ಕೆಟ್ಟದಾಗಬೇಕೆಂದು ಬಯಸುವುದಿಲ್ಲ. ಆದರೆ ತಂದೆ ತಾಯಿ ತನ್ನ ಮಕ್ಕಳು ಸಂತೋಷದಿಂದಿರಬೇಕೆಂದು ಬಯಸುತ್ತಾರೆ. ನಿನಗೆ ನಿನ್ನ ತಪ್ಪಿನ ಅರಿವಾಗಿದೆ. ಹಾಗಾಗಿ ನಾನು ನಿನ್ನ ಜೊತೆ ಮನೆಗೆ ಬರುತ್ತೇನೆ. '' ಎಂದು ಹೇಳುತ್ತಾ ತಂದೆಯು ಮಗನೂ ಮನೆಯ ಕಡೆ ನಡೆದರು.

**ಶರಧಿ , XA**



# ಕಟ್ಟೆಯ ಮೇಲಿದೆ ಸುಂದರ ಚಿಟ್ಟೆ

ಕಟ್ಟೆಯ ಮೇಲಿದೆ ಸುಂದರ ಚಿಟ್ಟೆ
ರೆಕ್ಕೆಯ ಮೇಲೆ ಬಣ್ಣದ ಬಟ್ಟೆ
ಮೈಯನು ಮುಟ್ಟಲು ಎಂತಾ ನುಣುಪು
ಮಿಂಚುವ ಬಣ್ಣಕೆ ಎಂತಾ ಹೊಳಪು
ಆಹಾಃ ಎಂತಹಸುಂದರ ಸೃಷ್ಠಿ
ತಾಗದೆ ಇರಲೀ ಯಾರದು ದೃಷ್ಠಿ
ಚಿಮ್ಮುವ ಚಿಟ್ಟೆಯ ಚೆಲುವಿನ ಆಟ
ನೋಡುವ ಕಂಗಳ ಬೆರಳಿನ ನೋಟ
ಕಟ್ಟೆಯ ಮೇಲಿದೆ ಸುಂದರ ಚಿಟ್ಟೆ
ಬೆಡಗು - ಬಿನ್ನಾಣದ ಜಂಬದ ಮೊಟ್ಟೆ
ಚಿಟ್ಟೆಗೆ ಇಲ್ಲವೆ ಹೊರಗಿನ ಅರಿವು
ಬಾರದೆ ಇರಲೀ ಬದುಕಲೀ ನೋವು
ಬೇಕಿದೆ ಗೆಳೆಯರೆ ನಿಮ್ಮಯ ನೆರವು
ಚಿಟ್ಟೆಯ ಕನಸನು ಕಾಯುವ ಮನವು

**ವಿಕ್ರಮ್ ಭಾರಧ್ವಾಜ್ . ಪಿ, IX A**





# ವಿದ್ಯಾರ್ಥಿಗಳ ಮೇಲೆ ಮೊಬೈಲ್ ಪ್ರಭಾವ

"ವಿದ್ಯಾರ್ಥಿ"ಗಳು ಎಂದರೆ ತಲಿಯುವ ಮಕ್ಕಳು. ಅವರು ಮೊಬೈಲುಗಳನ್ನು ನೋಡಿ ಕುಳಿತುಕೊಳ್ಳಬಾರದು. ಮೊಬೈಲ್ ಹಾನಿಕರವು ಹೌದು ಲಾಭದಾಯಕವು ಹೌದು. ಹಾಗೇಯೇ ಇದು ತುಂಬಾ ಹಾನಿಕಾರಕವಾಗಿದೆ. ಅದರಲ್ಲೂ ವಿದ್ಯಾರ್ಥಿಗಳು ಇದನ್ನು ಬಳಸಿದರೆ ತಮ್ಮ ಪಾಠದ ಕಡೆಗೆ ಗಮನವೇ ಕೊಡುವುದಿಲ್ಲ. ಮೊಬೈಲ್ ಗಳಲ್ಲಿ'Games'ಗಳನ್ನು ಆಡುತ್ತಾ ಕುಳಿತುತೊಳ್ಳುತ್ತಾರೆ. ಪಾಠ ಓದುವುದಿಲ್ಲ ಎಂದು ಯಾವಾಗಲೂ ತಂದೆ - ತಾಯಿ ಬೈಯುತ್ತಿರುತ್ತಾರೆ. ಆದರೆ ಮಕ್ಕಳು ಮೈಯನ್ನು ಮರೆತು ಮೊಬೈಲ್ ನಲ್ಲಿಯೇ ಮುಳುಗಿರುತ್ತಾರೆ.ಅವರು ಶಾಲೆಯ ಮನೆಕೆಲಸ (Home work)ಮಾಡದೆಯೇ ಮೊಬೈಲ್ ನಲ್ಲಿಯೇ 'Games ' ಆಡುತ್ತಾರೆ. ಹೆಚ್ಚು ಮೊಬೈಲ್ ನೋಡುವುದರಿಂದ ಕಣ್ಣಿಗೆ ಸಹ ಹಾನಿಕಾರಕವಾಗಿದೆ. ಹಿಂದಿನಕಾಲದಲ್ಲಿ ಮೊಬೈಲ್ ಎಂಬ ಮೂರು ಪದವೇ ಇರಲಿಲ್ಲ. ಆದರೆ ಈಗ ವಿಜ್ಞಾನವು ಬೆಳೆದು ಮೊಬೈಲ್ ಎಂಬ ಮೂರು ಅಕ್ಷರ ಎಲ್ಲೆಡೆ ಬೆಳೆದುಕೊಂಡಿದೆ. ಮಕ್ಕಳಲ್ಲಿ ಮೊಬೈಲ್ ಶಕ್ತಿಯು ಆಳವಾಗಿ ಬೆಳೆದಿದೆ. ಮಕ್ಕಳಿಗೆ ಪಾಠದ ಕಡೆಗೆ ಗಮನಿಸಲು ಮೊಬೈಲ್ ಬಿಡುವುದಿಲ್ಲ. ಮಕ್ಕಳಿಗೆಪಾಠದಲ್ಲಿ ಅಷ್ಟು ಆಸಕ್ತಿ ಇರುವುದಿಲ್ಲ ಎಂಬುದು ಅವರ ಮುಖಾಭಾವನೆಯನ್ನು ನೋಡುವಾಗಲೇ ಗೊತ್ತಾಗುವುದು. ಮಕ್ಕಳು ಮೊಬೈಲ್ಗಳನ್ನು ಅತಿಯಾಗಿ ಹಚ್ಚಿಕೊಂಡಿದ್ದಾರೆ. ಮೊಬೈಲ್ನಲ್ಲಿ ಹಾನಿಕಾರಕ ಎಂದರೆ ಅದು ನಮ್ಮ ಕಣ್ಣಿಗೆ, ಕಿವಿಗೆ ,ಹಾನಿಕಾರಕವಾಗಿದೆ. ಉದಾಹರಣೆಗೆ Photos ,video, ಇವುಗಳನ್ನು ನೋಡುವಾಗ :ಕಿವಿ ನಾವು ಇಯರ್ ಫೋನ್ ನಲ್ಲಿ ಹಾಡುಗಳನ್ನು ಕೇಳುವಾಗ ನಮ್ಮ ಕಿವಿಗೆ ಮತ್ತು ಕಣ್ಣಿಗೆ ಹಾನಿಯಾಗಿತ್ತದೆ. ಮೊಬೈಲ್ ನಲ್ಲಿ ಲಾಭದಾಯಕವೂ ಉಂಟು. ಯಾವುದು ಎಂದರೆ ನಾವು ಈ ಕೂಡಲೇ ಯಾರಿಗಾದರೂ ಏನಾದರೂ ಸಂದೇಶವನ್ನು ತಿಳಿಸುವುದಾದರೆ ನಾವು ಅವರಿರುವ ಕಡೆಗೆ ಹೋಗಬೇಕು ಎಂಬುದರ ವಿಷಯವೇ ಬರುವುದಿಲ್ಲ. ಯಾಕೆಂದರೆ ಮೊಬೈಲ್ ನಿಂದ ಎಷ್ಟೇ ದೂರವಿರಲಿ ನಾವು ಒಂದು ಫೋನ್ ಕಾಲ್ ಮಾಡಿದರೆ ಸಾಕು ಅಲ್ಲಿಗೆ ಆ ಸಂದೇಶವು ತಲುಪುವುದು. ಈಗೀಗ ಮೊಬೈಲ್ ಚಿಕ್ಕ ಮಗುವಿನಿಂದ ಹಿಡಿದು ವೃದ್ಧರ ಕೈಯಲ್ಲೂ ಕೂಡ ಇದೆ. ಮೊಬೈಲ್ ಫೋನನ್ನು ಮಾರ್ಟಿನ್ ಕೂಪರ್ ಎಂಬ ವಿಶ್ವ ಪ್ರಸಿದ್ಧ ವಿಜ್ಞಾನಿ ಕಂಡು ಹಿಡಿದರು. ಮೊಬೈಲ್ ಕಂಡು ಹಿಡಿದುದರಿಂದ ನಮ್ಮ ವಿಶ್ವವೇ ಬದಲಾಯಿತು. ಯಾಕೆಂದರೆ

ಅದು ಇಂದು ವಿಶ್ವವ್ಯಾಪ್ತಿಯಾಗಿದೆ. ನಾವಿದ್ದಲ್ಲಿಯೇ ಇದ್ದು ಬೇರೆ ದೂರದಲ್ಲಿರುವ ಜನರೊಂದಿಗೆ ಮಾತುಕತೆ ನಡೆಸಬಹುದು, ಹಾಡು ಕೇಳಬಹುದು, ಫೋಟೋ ತೆಗೆಯಬಹುದು,ಸಂದೇಶವನ್ನು ರವಾನಿಸಬಹುದು, ಅದಲ್ಲದೆ ಇಂಟರ್ನೆಟ್ ಸೌಕರ್ಯ, ಫೇಸ್ ಬುಕ್,ಗೂಗ್ ಲ್, ವಾಟ್ಸ್ ಆಪ್, Music,Photos ಇಂತಹ ಅನೇಕ ಸೌಕರ್ಯ ಫೋನ್ ನಲ್ಲಿ ಇದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವ ಹಾಗೆ ಎಲ್ಲೆಂದರಲ್ಲಿ ಕೊಂಡೊಯ್ಯಲು ಸಾಧ್ಯವಿರುವ ಮೊಬೈಲ್ ತ್ರಿವಿಕ್ರಮನಂತೆ ಕಾರ್ಯವೆಸಗುತ್ತಿರುವುದು ವೈಜ್ಞಾನಿಕ ಜಗತ್ತಿನ ಅದ್ಭುತವೇ ಸರಿ. ಮೊಬೈಲ್ನಲ್ಲಿ "ತಪ್ಪಿದ ಕರೆ" ಗಳನ್ನು ನೋಡಲು ಸಾಧ್ಯವಿದೆ. ಯಾವುದೇ ವಸ್ತುವನ್ನು ನಾವು ಉಪಯೋಗಿಸುವ ರೀತಿಯಲ್ಲಿ ಒಳಿತುಕೆಡುಕುಗಳು ಅಡಗಿವೆ.

**ಅನುಷ.ಎಚ್, IX C**

# ಅಮ್ಮ

ಅಮ್ಮ ಅಮ್ಮ ನನ್ನಮ್ಮ
ಮಡಿಲಿನ ಮಮತೆಯ, ಕರುಳನು ಕಲಿತೆ.
ಬದುಕಿಗೆ ಸಮತೆ ತಂದವಳು ನೀ
ಪ್ರೀತಿಯ ಸ್ಪರ್ಶ ನಗುವಲಿ ಹರ್ಷ
ಸ್ನೇಹದ ವರ್ಷ ಸುರಿಸುವಳು.
ಕೈಯಲಿ ತುತ್ತು , ಕೆನ್ನೆಗೆ ಮುತ್ತು
ಲಾಲಿಯ ಹಾಡು ಹಾಡುವಳು.
ಕಥೆಯನ್ನು ಹೇಳಿ , ಹಾಡುತ ಕುಣಿದು
ಮೈಮನ ತಣಿಸಿ ನಲಿಯುವಳು.
ಜಾರದೆ ,ಬೀಳದೆ ,ನೋಯದೆ
ಅಳಿಸದೆ ರೆಪ್ಪೆಯದಂದಿ ಸಲಹುವಳು
ಅಮ್ಮ ಅಮ್ಮ ನನ್ನಮ್ಮ
ಪ್ರೀತಿಯ ಮಡಿಲು ನಿನ್ನದಮ್ಮ.

**ವೈಶಾಲಿ. ಪಿ , X D**

# ಹೆಣ್ಣು ಸಮಾಜದ ಕಣ್ಣು



"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ" -ಎಲ್ಲಿ ನಾರಿಯರನ್ನು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಎಂದು ಹೇಳುತ್ತಿದ್ದ ಕಾಲವೊಂದಿತ್ತು. ವೇದ ಮಾತೆ ಗಾಯತ್ರಿ , ತ್ರಿಮೂರ್ತಿಗಳ ತಾಯಿ ದೇವಿ ಎಲ್ಲರೂ ಸ್ತ್ರೀಯರೇ. ಆದರೆ ಕಾಲಾಂತರದಲ್ಲಿ ಈ ಧೋರಣೆ ಬದಲಾಯಿತು ಪುರುಷ ಪ್ರಧಾನವಾದ ಸಮಾಜದಲ್ಲಿ ಸ್ತ್ರೀಯರು ಅದಕ್ಕೆ ಹೊಂದಿಕೊಂಡು ಗೃಹಕೃತ್ಯವನ್ನೂ ಸಂಭಾಳಿಸಿಕೊಂಡು ಬರುವಂತಾಯಿತು.

ಪುರುಷರು ಹೊರಗೆ ದುಡಿದು ಹೆಂಡತಿ ಮಕ್ಕಳನ್ನು ಪೋಷಿಸಲು ಹಣ ಸಂಪಾದಿಸುತ್ತಿದ್ದರು. ಹೊರಗೆ ದುಡಿದು ಮನೆಗೆ ಬಂದ ಪುರುಷರಿಗೆ ಸೇವೆ ಸತ್ಕಾರ ನಡೆಯುತ್ತಿತ್ತು. ಸ್ತೀಯರು ಅದು ತಮ್ಮ ಕರ್ತವ್ಯವೆಂದು ಸಂತೋಷದಿಂದ, ತಮ್ಮ ತಂದೆ,ಅಣ್ಣ, ತಮ್ಮಂದಿರಿಗೆ, ನಂತರ ತನ್ನ ಮಾವ ,ಪತಿ, ಮೈದುನಂದಿರಿಗೆ, ಹೊತ್ತು ಹೊತ್ತಿಗೆ ಊಟ ಉಪಚಾರ, ಉಡುಗೆಗಳನ್ನು ಎಲ್ಲವನ್ನೂ ಸಿದ್ಧಪಡಿಸುತ್ತಿದ್ದರು

ಎಲ್ಲರೂ ಸಂತೋಷದಿಂದ ಒಬ್ಬರಿಗೊಬ್ಬರು ಹೊಂದಿಕೊಂಡು , ಕೆಲಸಗಳನ್ನು ಹಂಚಿಕೊಂಡು ಮಾಡುತ್ತಾ ಹಾಯಾಗಿರುತ್ತಿದ್ದರು.ಇದೇ ಮುಂದುವರಿದು ಕೆಲವು ಮನೆಗಳಲ್ಲಿ ಸ್ತ್ರೀಯರುನ್ನು ಸೇವಕಿಯಂತೆ ನಡೆಸಿಕೊಳ್ಳಲು ಪ್ರಾರಂಭಿಸಿದರು. ಎಲ್ಲಾ ಕೆಲಸಗಳನ್ನು ಅವಳ ಮೇಲೆ ಹೇರಿದ್ದೂ ಅಲ್ಲದೆ ಅವಳನ್ನು ಮನೆಯಿಂದ ಹೊರಗೆ ಹೊಗುವ ಅವಕಾಶವನ್ನೇ ಮುಚ್ಚಿಬಿಟ್ಟರು. ಸಂಸಾರದಲ್ಲಿ ಸ್ತ್ರೀಯರನ್ನು ನೋಡುವ ರೀತಿಯೇ ಬೇರೆಯಾಯಿತು ಹೆಣ್ಣೆ ಹೆಣ್ಣಿಗೆ ಶತ್ರುವಾದಳು.

**ಅಕ್ಷತ,** X D



# ಸೇವೆ



ಸೇವೆ ಎಂಬ ಪದ ಬಹಳ ಅರ್ಥಪೂರ್ಣವಾಗಿದೆ. ಹಾಗೂ ಸೇವೆ ಎಂಬುವುದು ಮಹತ್ವದ ವಿಷಯವಾಗಿದೆ. ಸೇವೆ ಮಾಡದಿರುವುದು ತಪ್ಪಲ್ಲ ಸೇವೆ ಮಡುವವರಿಗೆ ಪ್ರೋತ್ಸಾಹಿಸದೆ ಸೇವೆ ಮಾಡುವವರನ್ನು ತಡೆಯುವುದು ತಪ್ಪು. ಸೇವೆಯಲ್ಲಿ ಹಲವು ರೀತಿಯ ಸೇವೆಗಳು ಒಳಗೊಂಡಿರುತ್ತದೆ. ಅದರಲ್ಲಿ ಪ್ರಮುಖ ವಾದುದು "ದೇಶಸೇವೆ" ಈ ಸೇವೆಯನ್ನು ನಮ್ಮ ಭಾರತ ದೇಶದ ಗಡಿನಾಡಲ್ಲಿ ಚಳಿ,ಮಳೆ,ಉರಿಬಿಸಿಲು,ಬಿರುಗಾಳಿಯಲ್ಲೂ ಎದೆಗುಂದದೆ ಧೃಢವಾಗಿ ನಿಂತು ದೇಶ ಕಾಯುವ ಯೋಧರು ಮಾಡುವಂತಹ ದೊಡ್ಡ ಸೇವೆಯಾಗಿದೆ. “ದೇಶಸೇವೆಯೇ ಈಶ ಸೇವೆ "ಎಂಬ ಗಾದೆ ಮಾತಿದೆ. ಅದು ನೂರಕ್ಕೆ ನೂರು ಸತ್ಯವಾದ ಮಾತು.

ಇನ್ನು "ರಕ್ಷಣಾಧಿಕಾರಿಗಳು" ಎಂದರೆ ಪೋಲಿಸ್ ಇವರು ಅಪರಾಧಿಗಳಿಗೆ ಶಿಕ್ಷೆ ಕೊಡುವಂತೆ ಮಾಡಿ ನಿರಪರಾಧಿಗಳನ್ನು ರಕ್ಷಿಸುತ್ತಾರೆ ಹಾಗು " ವೈದ್ಯರು" (ಡಾಕ್ಟರ್) ರೋಗಿಗಳಿಗೆ ಸರಿಯಾಗಿ ಮದ್ದನ್ನು ಕೊಟ್ಟು ರೋಗಿಗಳನ್ನು ಪ್ರಾಣಾಪಯದಿಂದ ಕಾಪಾಡುತ್ತಾರೆ.

ಶಿಕ್ಷಕರು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದು, ತಂದೆ ತಾಯಂದಿರ ವೃದ್ಧಾಪ್ಯಕಾಲದಲ್ಲಿ "ಮಕ್ಕಳು" ಅವರನ್ನು ಚೆನ್ನಾಗಿ ನೋಡಿಕೊಳ್ಳುವುದು ಇದೆಲ್ಲಾ ಅವರವರ ಕರ್ತವ್ಯವಾಗಿದ್ದರು ಅದೊಂದು ರೀತಿಯ ಸೇವೆಯಾಗಿದೆ. ಇನ್ನು ನಮ್ಮ ಸುತ್ತಮುತ್ತಲಿ ಜಗತ್ತಲ್ಲಿ ಹಲವು ರೀತಿಯ ಸೇವೆಗಳಿವೆ. ಕೆಲವರು ಯಾರಾದರು ರೋಡಲ್ಲಿ ಅಪಘಾತದಿಂದ ಬಿದ್ದು ನರಳಾಡುತ್ತಿರುವಾಗ ಗಮನಿಸದೆ ಹಾಗೆ ಹೋಗುತ್ತಾರೆ. ಅದು ಮನುಷ್ಯನ ಮಾನವೀಯತೆಯು ಅಲ್ಲ. ಸೇವೆ ಎಂಬುವುದು ಮಾನವೀಯತೆ ಎಂಬುದರಲ್ಲಿ ಒಂದಾಗಿದೆ.

ನಾವು ಏನಾದರು ಮಾಡಬೇಕೆಂದರೆ ಸೇವೆ ಮಾಡಬೇಕು ಅಥವಾ ಸೇವೆ ಮಾಡುವವರ ಜೊತೆ ಕೈ ಜೋಡಿಸಬೇಕು. ದೇವರು ನಮಗೆ ಏನಾದರು ಹೆಚ್ಚು ಕೊಟ್ಟಿದ್ದರೆ ಅದನ್ನು ಕಷ್ಟದಲ್ಲಿರುವವರಿಗೆ ಕೈಲಾದಷ್ಟು ದಾನ ಮಾಡಿದರೆ ಅದು ಒಂದು ರೀತಿಯ ಸೇವೆ. ಇಂದಿನ ಯುವ ಪೀಳಿಗೆಗೆ "ಸೇವೆ" ಎಂಬ ಪದದ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಲು ಹೊರಟವರು ತುಂಬಾ ಜನ ಸಿಗುತ್ತಾರೆ. ಇಂದು

ಜಗತ್ತಿನಲ್ಲಿ ಹಲವು ಸೇವಾ ವಲಯಗಳು ತೆರೆದಿದೆ. ಅದು ನೊಂದವರಿಗೆ ಸಹಾಯ ಮಾಡುತ್ತವೆ. ಇನ್ನು ಮುಂದೆಯಾದರು ಎಲ್ಲರೂ ತಮ್ಮ ತಮ್ಮ ಕೈಲಾದಷ್ಟು ಸಹಾಯ ಮಾಡುವ ಮನೋಭಾವ ತೋರುವಂತಾಗಲಿ.

**ವೈಶಾಲಿ .ಎಮ್. ಶೆಟ್ಟಿ, IX B**

## ಸಾಧನೆ




ಒಂದು ದೊಡ್ಡ ಹಳ್ಳಿಯಿತ್ತು. ಆ ಹಳ್ಳಿಗೆ ಒಬ್ಬ ನಾಯಕನಿದ್ದ. ಹಳ್ಳಿಯವರೆಲ್ಲ ಹೆಚ್ಚಿನವರು ಕೃಷಿಕರಾಗಿದ್ದರು. ಯಾವುದೇ ಕೃಷಿ ಮಾಡಿದರು ಹಳ್ಳಿಯ ನಾಯಕನಿಗೆ ಅರ್ಧಪಾಲು ನೀಡಬೇಕಿತ್ತು. ಆ ಹಳ್ಳಿಯಲ್ಲಿ ಒಬ್ಬ ಬಡವ ರೈತನಿದ್ದ. ಅವನು ತನ್ನ ಸಣ್ಣ ಜಾಗದಲ್ಲಿ ಕೃಷಿ ಮಾಡುತ್ತಿದ್ದನು. ಅವನ ಜೀವನಕ್ಕೆ ಆ ಕೃಷಿಯ ಫಲವು ಸಾಕಾಗುತ್ತಿತ್ತು. ಒಂದು ದಿನ ಹಳ್ಳಿಯ ನಾಯಕನಿಗೆ ಸೇವಕನಿಂದ ಒಂದು ಸಂದೇಶ ಬಂದಿತ್ತು. ಯಾರೋ ರೈತ ತನಗೆ ಬಂದ ಫಸಲಿನ ಅರ್ಧಪಾಲು ಕೊಡುವುದಿಲ್ಲ ಎಂದು. ಇದನ್ನು ಕೇಳಿದ ಹಳ್ಳಿಯ ನಾಯಕ ರೈತನನ್ನು ಬರಮಾಡಿ ಕೊಂಡನು. ನಿಮ್ಮ ಕೃಷಿಯಲ್ಲಿ ಒಂದು ಸ್ವಲ್ಪವೂ ಫಸಲು ಸಿಗಲಿಲ್ಲ. ಅಲ್ಲದೇ ಈ ಹಳ್ಳಿಯ ರೈತರಿಗೆಲ್ಲ ನಾನೇ ನೀರು , ಗೊಬ್ಬರ ಬೇಕಾದಷ್ಟು ನೀಡುತ್ತಿದ್ದೆನೆ. ಏನು ನಿಮಗೆ ಕೃಷಿ ಮಾಡಲು ಯಾವುದೇ ಸೌಕರ್ಯವಿಲ್ಲದವೆ? ಆಗ ಆ ರೈತನು ಹೌದು ಬುದ್ಧಿ ನಮ್ಮಲ್ಲಿ ಜಾಗ ಇಲ್ಲ. ಹೇಕಾದಷ್ಟು ನೀರು, ಗೊಬ್ಬರ ದೊರೆಯುತ್ತದೆ ಎಂದನು. ಆಗ ಆಗಲಿ ನಿಮಗೆ ಜಾಗದ ವ್ಯವಸ್ಥೆ ಮಾಡಿಕೊಡುವ ಆದರೆ ಸ್ವಲ್ಪ ಸಮಯಾವಕಾಶ ಬೇಕು ಎಂದು ಹೇಳಿದನು. ಆಗಲಿ ಬುದ್ಧಿ ನಾನೀನ್ನು ಬರುತ್ತೇನೆ. ಎಂದು ಹೇಳಿ ಬಡವ ರೈತ ಹೊರಟು ಹೊದನು.

ಕೆಲವು ದಿನಗಳ ನಂತರ ಆ ಹಳ್ಳಿಯ ನಾಯಕ ಯಾವುದೋ ಖಾಯಿಲೆಯಿಂದ ತೀರಿಕೊಂಡನು. ಅವನ ಸ್ಥಾನಕ್ಕೆ ಬೇರೊಬ್ಬ ನಾಯಕನಾಗಿ ಬಂದನು. ಇವನು ಮಹಾ ವಸೂಲುಗಾರ. ಒಂದು ದಿನ ಹಳ್ಳಿಯವರನ್ನೆಲ್ಲ ಸಭೆ ಕರೆದನು. ಹಾಗೂ ಎಲ್ಲರಲ್ಲೂ ನಾನು ಯಾವುದೇ ಸೌಕರ್ಯ ನೀಡುವುದಿಲ್ಲ ನೀವಾಗಿಯೇ ಕೃಷಿ ಪಾಲು ನೀಡಬೇಕು. ಹೆಚ್ಚುವಾದಕ್ಕೆ ಬರುವವರು ಈ ಹಳ್ಳಿಯಿಂದ ಗಡಿ

ಪಾರು ಮಾಡಲಾಗುವುದು. ಎಂದನು. ಬಡವ ರೈತನು ಇದನ್ನು ಕೇಳಿ ಮೂಕನಾದನು. ಒಂದು ಮಳೆಗಾಲದಲ್ಲಿ ಜೋರಗಿ ಮಳೆಬಂತು. ಒಳ್ಳೆಯ ಮಳೆಯಲ್ಲಿ ಬೇಕಾದಷ್ಟು ಬೆಳೆ ಬೆಳೆಯಿತು. ಎಲ್ಲರೂ ಸೇರಿ ನಾಯಕನ ಬಳಿ ಬಂದು ಫಸಲುಗಳನ್ನು ನೀಡುತ್ತಿದ್ದರು. ಆದರೆ ಬಡವ ರೈತ ಕೊನೆಗೆ ತನಗೆ ಲಭಿಸಿದ ಫಲವನ್ನು ನೀಡಿದನು. ಆಗ ನಾಯಕನು ಏನಿದು ತುಂಬಾ ಕಡಿಮೆಯಾಗಿದೆಯಲ್ಲ ಎಂದನು. ರೈತ ಬಹಳ ಭಯದಿಂದ ನಡುಗಿದನು. ಮುಂದಿನ ದಿನ ಸರಿಯಾಗಿ ಮಳೆಯು ಬರಲಿಲ್ಲ ಬೆಳೆಯು ಆಗಲಿಲ್ಲ ಕೆಲವು ಮಂದಿ ಸ್ವಲ್ಪ ಮಟ್ಟಿಗೆ ಬೆಳೆ ತೆಗೆದರು . ಇನ್ನು ಕೆಲವು ಮಂದಿ ಖಾಲಿ ಕೈಯಲ್ಲಿ ಬಂದರು. ಅದರಲ್ಲಿ ರೈತನೂ ಒಬ್ಬನಾಗಿದ್ದನು. ನಾಯಕ ಅವರನ್ನೆಲ್ಲ ತನ್ನ ಹಳ್ಳಿಯಿಂದ ಗಡೀ ಪಾರು ಮಾಡಿದನು. ಬಡವ ರೈತ ಹೆಂಡತಿ ಮಕ್ಕಳನ್ನು ಕರೆದುಕೊಂಡು ಪೇಟೆಯ ದಾರಿಗೆ ಇಳಿದನು. ಕೆಲವು ದಿನಗಳವರೆಗೆ

ಪೇಟೆಯ ಬದಿಗಳಲ್ಲಿ ಜೀವನ ಕಳೆದರು. ಒಂದು ಪೇಟೆಯಲ್ಲಿ ಬರುತ್ತಿದ್ದ ದಾರಿಹೋಕ ರೈತನನ್ನು ಕುರಿತು ಪರಿಚಯಿಸಿ ಕೊಂಡ ತನಗೆ ಆದ ಕಷ್ಟ ನಷ್ಟಗಳನ್ನೆಲ್ಲ ರೈತ ದಾರಿಹೋಕನಿಗೆ ತಿಳಿಸಿದನು. ದಾರಿಹೋಕನಿಗೆ ಕಣ್ಣೀರು ತುಂಬಿ ಬಂತು. ಅವನು ರೈತನ ಕುಟುಂಬವನ್ನು ಕರೆದು ಕೊಂಡು ಮನೆಗೆ ಹೋದನು. ಸ್ವಲ್ಪ ದಿವಸ ಅಲ್ಲಿ ಗುಡಿಸಲಿನಂತಹ ಮನೆಯನ್ನು ಮಾಡಿ ಜೀವಿಸಿದರು. ಸ್ವಲ್ಪ ದಿನಗಳ ನಂತರ ದಾರಿಹೋಕನ ಒಪ್ಪಿಗೆಯಿಂದ ಕೃಷಿ ಮಾಡಿದನು. ಕೃಷಿಯ ಫಸಲು ರೈತನನ್ನು ಶ್ರೀಮಂತನನ್ನಾಗಿಸಿತು.ರೈತನು ದೊಡ್ಡ ಶ್ರೀಮಂತನಾದನು. ಯಾವುದೇ ವಸ್ತುವಿಗೂ ಕೊರತೆಯುಮಟಾಗಲಿಲ್ಲ. ಅವನು ಮುಂದೆ ಸುಖವಾಗಿ ಸಂಸಾರ ಮಾಡಿದನು.

**ಸುನಿತ.ಟಿ, X C**



# ಯುದ್ಧದ ಪರಿಣಾಮಗಳು



ಈ ದೇಶದಲ್ಲಿ ನಡೆಯುವ ಎಲ್ಲಾ ಯುದ್ಧಗಳು ಭೂಮಿ ಮತ್ತು ದೇಶಕೋಸ್ಕರ. ಆದರೆ ಈಗ ನಡೆಯುತ್ತಿರುವ ಯುದ್ಧದಲ್ಲಿ ಅನೇಕ ಸೈನಿಕರ ಕುಟುಂಬವು ಅನಾಥವಾಗುತ್ತದೆ. ಅದು ಅಲ್ಲದೆ ಎಷ್ಟೋ ಸೈನಿಕರು ತಮ್ಮ ಜೀವನವನ್ನು ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ. ಯುದ್ಧದ ನಂತರ ನಮ್ಮ ದೇಶಕ್ಕೆ ಆರ್ಥಿಕವಾಗಿಯೂ ನಷ್ಟ ಉಂಟಾಗುತ್ತದೆ. ಹಾಗೂ ಇದೀಗ ನಡೆಯುತ್ತಿರುವ ಭಯೋತ್ಪಾದರ ಧಾಳಿಯಿಂದ ನಮ್ಮ ದೇಶಕ್ಕೆ ಮತ್ತು ಪ್ರಪಂಚಕ್ಕೆ ಅನೇಕ ಕಷ್ಟನಷ್ಟಗಳು ಉಂಟಾಗುತ್ತದೆ. ಉದಾ:ಇತ್ತೀಚೆಗೆ ಭಯೋತ್ಪಾದಕರು ನಡೆಸಿದ ಧಾಳಿ ಹಾಗೂ ಇದೀಗ ಭಯೋತ್ಪಾದಕರು ಕಾಶ್ಮೀರದ ಗಡಿಪ್ರದೇಶದಲ್ಲಿ ನಡೆಸುತ್ತಿರುವ ಯುದ್ಧದಿಂದ ಕಾಶ್ಮೀರದ ಜನತೆಗೆ ತಮ್ಮ ಮನೆಮಠವನ್ನು ಬಿಟ್ಟು ಬದುಕುವ ಸ್ಥಿತಿ ಬಂದಿದೆ. ಇದಕ್ಕೆಲ್ಲಾ ಕಾರಣ ಕಾಶ್ಮೀರದ ಮೇಲೆ ಇರುವ ಪಾಕಿಸ್ಥಾನದ ದುರಾಂಕರ ಮುಂಬಯಿನಲ್ಲಿ ಭಯೋತ್ಪಾದಕರು ನಡೆಸಿದ ಹೋಟೆಲ್ ತಾಜ್ ಮಹಲ್ ದಾಳಿಯಲ್ಲಿ ಸಂಧೀಪ್ ಉಣ್ಣಿಕೃಷ್ಣನ್ ಎಂಬ ನಮ್ಮ ನಾಡಿನ ವೀರಯೋಧ ಅಮರನಾಗಿದ್ದಾನೆ. ಅದಲ್ಲದೇ ಆ ದಾಳಿಯಲ್ಲಿ ನಮ್ಮ ದೇಶಕ್ಕೆ ಅದೇಷ್ಟೇ ನಾಶನಷ್ಟಗಳು ಉಂಟಾಗುತ್ತದೆ. ನಮ್ಮೆಲ್ಲರಿಗೂ ತಿಳಿದಾಗೆ ಜಗತ್ತಿನ ಎರಡನೇ ಮಹಾಯುದ್ಧದಲ್ಲಿ ಜಪಾನಿನ ಹಿರೋಶಿಮ ಮತ್ತು ನಾಗಸಾಕಿಯ ಮೇಲೆ ನಡೆದ ಅನುಬೋಂಬ್ ದಾಳಿಯಲ್ಲಿ ಇಡೀ ಜಪಾನ್ ಅದೇಷ್ಟೋ ಕಾಲಕ್ಕೆ ನಷ್ಟಗಳನ್ನು ಅನುಭವಿಸುವುದು. ನಾವೀಗ ನೋಡುತ್ತೆರುವ ಅಭಿವೃದ್ಧಿ ಹೊಂದಿರುವ ಜಪಾನನ್ನು ಮರುಸ್ಥಾಪನೆ ಮಾಡಲು ಅದೇಷ್ಟೋ ಕಾಲ ಅಲ್ಲಿಯ ಜನತೆ ಕಷ್ಟಪಟ್ಟಿದ್ದಾರೆ. ನಮ್ಮ ದೇಶದಲ್ಲಿ ಅತೀ ದೊಡ್ಡ ಮಹಾಯುದ್ಧವಾದ ಕಾರ್ಗಿಲ್ ಯುದ್ಧದಲ್ಲಿ (ನಡೆದ ವರ್ಷ ಮೇ - ಜುಲೈ೧೯೯೯)ನಮ್ಮ ದೇಶದಲ್ಲಿ ೫೨೭ ಯೋಧರು ಅಮರರಾಗಿದ್ದಾರೆ.ಹಾಗೂ ೧೭೬೩ ಯೋಧರು ಗಾಯಗೊಂಡಿದ್ದಾರೆ. ಕಾರ್ಗಿಲ್ ಯುದ್ಧವನ್ನು ಗೆಲ್ಲುವ ಮೂಲಕ ನಮ್ಮ ದೇಶವು ಪಾಕಿಸ್ಥಾನ ವಳಪಡಿಸಿಕೊಂಡ ನಮ್ಮ ದೇಶದ ನೆಲವನ್ನು ಪುನಃ ಪಡೆಯಿತು.ಯುದ್ಧದ ಅಂತ್ಯದಿಂದ ಫೆ. ೨೦೦೦ ದ ವರೆಗೆ, ಭಾರತೀಯ ಷೇರುಪೇಟೆ ೩೦% ಏರಿಕೆಗೊಂಡಿತು. ಮುಂದಿನ ಭಾರತೀಯ ರಾಷ್ಟ್ರೀಯ ಬಜೆಟ್ ನಲ್ಲಿ ಸೇನಾ ವೆಚ್ಚಕ್ಕೆ ಪ್ರಮುಖ

ಖರ್ಚುವೆಚ್ಚಗಳು ಸೇರಿದ್ದವು. ದೇಶಭಕ್ತಿಯು ಉಕ್ಕೇರಿತು ಮತ್ತು ಕಾರ್ಗಿಲ್ ಹೋರಾಟಕ್ಕೆ ಅನೇಕ ಗಣ್ಯ ವ್ಯಕ್ತಿಯು ಬೆಂಬಲ ವ್ಯಕ್ತಪಡಿಸಿದೆವು. ಪೈಲಟ್ ಅಜಯ್ ಅಹುಜಾ ಅವರನ್ನು ಹತ್ಯೆ ಮಾಡಿ ಪಾಕಿಸ್ಥಾನ ಪಡೆಗಳು ಅವರ ದೇಹವನ್ನು ಛಿದ್ರಗೊಳಿಸಿತ್ತೆಂದು ಭಾರತೀಯ ಅಧಿಕಾರಗಳು ವರದಿ ಮಾಡುವ ಬಳಿಕ ಪೈಲಟ್ ಅಜಯ್ ಅಹುಜಾ ಸಾವಿನ ಬಗ್ಗೆ ಮಾಧ್ಯಮದ ವರದಿಗಳು ಭಾರತೀಯರನ್ನು ಕೆರಳಿತು. ಯುದ್ಧವು ಭಾರತದ ಸೇನೆಗೆ ನಿರೀಕ್ಷೆಗಿಂತ ಹೆಚ್ಚು ಸಾವುನೋವುಗಳನ್ನು ಗಣನೀಯ ಪ್ರಮಾಣದಲ್ಲಿದ್ದರು. ಕಾರ್ಗಲ್ ಯುದ್ಧ ಪೂರ್ಣಗೊಂಡ ಒಂದು ತಿಂಗಳ ಬಳಿಕ, ಪಾಕಿಸ್ಥಾನದ ನೌಕಾಪಡೆಯ ವಿಮಾನವನ್ನು ಭಾರತ ಹೊಡೆರುಳಿಸಿದ ಅಂಟ್ಲಾಟಿಕ್ ಘಟನೆಯು ಉಭಯ ರಾಷ್ಟ್ರಗಳ ನಡುವೆ ಸಂಘರ್ಷದ ಕಿಡಿಯನ್ನು ಪುನಃ ಹೊತ್ತಿಸುವ ಆತಂಕ ಸ್ವಲ್ಪ ಸಮಯ ಇತ್ತು.ಯುದ್ಧದ ಬಳಿಕ ಭಾರತೀಯ ಸರ್ಕಾರ ಪಾಕಿಸ್ಥಾನದ ಜೊತೆ

ಸಂಬಂಧ ಕಡಿದು ಕೊಂಡಿತು ಮತ್ತು ತನ್ನ ರಕ್ಷಣಾ ಸಿದ್ಧತೆಯನ್ನು ಬಲಪಡಿಸಿತು. ಸ್ವದೇಶಿ ಅಸ್ತ್ರಗಳನ್ನು ಸಂಪಾದಿಸಲು ಭಾರತ ತನ್ನ ರಕ್ಷಣಾ ಬಜೆಟ್ ವೆಚ್ಚವನ್ನು ಹೆಚ್ಚಿಸಿತು. ಸೇನಾ ಖರೀದಿಯಲ್ಲಿ ಅಕ್ರಮಗಳು ನಡೆದ ಬಗ್ಗೆ ಮಾಧ್ಯಮಗಳು ವರದಿ ಮಾಡಿದವು ಮತ್ತು ಯುದ್ಧದ ಸಂದರ್ಭದಲ್ಲಿ ಅತಿಕ್ರಮಣಗಳನ್ನು ಊಹಿಸುವಲ್ಲಿ ಮತ್ತು ನುಸುಳುಕೋರರ ಗುರುತು , ಸಂಖ್ಯೆ ಪತ್ತೆ ಮಾಡುವಲ್ಲಿ ವಿಫಲವಾದ RAW ಮುಂತಾದ ಗುಪ್ತಚರ ಸಂಸ್ಥೆಗಳು ಟೀಕೆಗೆ ಗುರಿಯಾದವು. ಭಾರತದ ನಿಯತಕಾಲಿಕೆಯೊಂದರಲ್ಲಿ ಪ್ರಕಟವಾದ ಸಶಸ್ತ್ರ ಪಡೆಗಳ ಆಂತರಿಕ ಅಂದಾಜು ವರದಿಯಲ್ಲಿ ಅನೇಕ ವೈಫಲ್ಯಗಳನ್ನು ಬೊಟ್ಟು ಮಾಡಲಾಯಿತು.ಈ ರೀತಿಯಿಂದ ಭಾರತ ಮತ್ತು ಪಾಕಿಸ್ಥಾನವು ಇನ್ನು ಹೆಚ್ಚಿನ ರೀತಿಯಲ್ಲಿ ತಮ್ಮ ಸಂಬಂಧಮನ್ನು ಕಡಿದು ಕೊಂಡಿತು.

**ಶ್ರಾವ್ಯ, IX A**



# ಬದುಕಿನ ಮಹತ್ವ

ಬದುಕೆಂಬ ಜೀವನದ ರಥದಲಿ
ಧೈರ್ಯಗೆಡದೆ ನಿನ್ನ ಮನವು ಸಾಗಲಿ
ನೀರಿನ ಪ್ರವಾಹದ ಹಾಗೇ ಸಾಗುತ ಹರಿಯಲಿ
ಹೃದಯದಲ್ಲಿರುವ ದುಃಖ ಪರಿಣಾವನ್ನು ತೊಳೆಯಲಿ
ನೀರಿನಲ್ಲಿ ಹೇಗೆ ನಿನ್ನ ದೃಶ್ಯ ಬಿಂಬಿಸುತ್ತಿರುತ್ತದೆಯೋ
ಹಾಗೇ ನೀ, ಸ್ಥಿರವಾಗಿ ಚಿತ್ರಿಕರಿಸುತ್ತಿರುವೆಯೋ
ಮನಸ್ತಾಪ,ಮನಶಾಂತಿಯನ್ನು ಮುಕ್ತಪಡಿಸು
ದಿವ್ಯ ಶಿಲೆಯ ಜಲದಂತೆ ನೀ ಪ್ರಜ್ವಲಿಸು
ನಮ್ಮ ಜೀವನದಲ್ಲಿ ಸುಖ ಬಂದಾಗ ಹಿಗ್ಗದೆ
ನಾಶ,ನಷ್ಟ,ದುಃಖ ಬಂದಾಗ ಕುಗ್ಗದೆ
ಸುಖ,ದುಃಖ, ನಾಶ, ನಷ್ಟಗಳಲ್ಲಿ
ಬದುಕಿನ ಭಾವವು ಸಮಾನವಾಗಿ
ಎಳೆಮನಸುಗಳ ಪ್ರತಿಭೆಗಳ ಸತ್ವವೂ
ಬದುಕಿನ ಅರ್ಥಪೂರ್ಣವಾದ ಮಹತ್ವವೂ
ಸಾಧನಾತ್ಮಕ ಶಕ್ತಿಯೂ ನಮ್ಮದಾಗಲಿ
ಸಾಧಿ ತೋರಿಸುವ ಯುಕ್ತಿಯೂ ಛಲವಾಗಿರಲಿ

**ಸುಶ್ಮಿತ. ಸಿ, IX A**



# ಪ್ರಕೃತಿಯ ಶಾಪ

ಜನರ ಭಾವನೆಗೆ ಕೊನೆ ಸಿಗದಿರಲೂ
ಅತಿಯಾದ ಆಸೆಯು ಹೆಚ್ಚುತಲಿರಲು
ಪ್ರಕೃತಿಯ ನಾಶವು ಮಾಡುತಲಿರಲು
ಮುನಿದ ಪ್ರಕೃತಿ ಶಾಪವ ನೀಡಲೂ

ಸಾವಿರ ಜನರು ಕೂಗಾಡುತಲಿರಲೂ
ಮಾನವ ಅಟ್ಟಹಾಸವೂ ಮಿತಿಮೀರಿರಲೂ
ಜನರ ದುಃಖ ಸುಖ ಮುಗಿಯದೆ ಇರಲು
ಮುನಿದ ಪ್ರಕೃತಿ ಶಾಪವ ನೀಡಲೂ

ಮಳೆ ಜೋರಾಗಿ ಸುರಿಯುತಲಿರಲೂ
ನೆರೆಯೆಂಬ ಪ್ರವಾಹ ಬರುತಲಿರಲು
ನೀರಿನ ಮಟ್ಟವೂ ಏರುತಲಿರಲು
ಮುನಿದ ಪ್ರಕೃತಿ ಶಾಪವ ನೀಡಲೂ

ಮನೆ ಮಠವೆಲ್ಲ ನೀರು ತುಂಬಿರಲೂ
ಗಿಡ ಮರ ನೀರಲಿ ಕೊಚ್ಚುತಲಿರಲು
ಜನರ ಎಳೆದುಕೊಂಡು ಹೊಗುತಲಿರಲು
ಮುನಿದ ಪ್ರಕೃತಿ ಶಾಪವ ನೀಡಲೂ

ನಾಶನಷ್ಟವೂ ಸಂಭವಿಸಲು
ಮರಣದ ಸಂಖ್ಯೆಯೂ ಹೆಚ್ಚುತಲಿರಲೂ
ನಿಲ್ಲದ ಮಳೆಯು ಸುರಿಯುತಲಿರಲೂ
ಮುನಿದ ಪ್ರಕೃತಿ ಶಾಪವ ನೀಡಲೂ

ಕಡಲು ಉಕ್ಕಿ ಉಕ್ಕಿ ಹರಿಯುತಲಿರಲೂ
ನೀರಿನ ಪ್ರವಾಹ ಹೆಚ್ಚುತಲಿರಲೂ
ಜನರ ಕಷ್ಟವೂ ತೀರದೆ ಇರಲೂ
ಮುನಿದ ಪ್ರಕೃತಿ ಶಾಪವ ನೀಡಲೂ

ದೇವರ ನಾಡಲಿ ನೀರಿನ ಹೊಳೆಯೊ
ದೇವರ ನಂಬಿ ಜೀವ ಬಿಟ್ಟರೋ
ಕೇರಳ ಸಂಪೂರ್ಣ ಮುಳುಗುತಲಿರಲೂ
ಮುನಿದ ಪ್ರಕೃತಿ ಶಾಪವ ನೀಡಲೂ



ಜನರು ಕ್ಷಮೆಯ ಯಾಚುತಲಿರಲೂ
ಪ್ರಕೃತಿಯ ಕೋಪವೂ ತಣಿಯುತಲಿರಲೂ
ಪರಿಸರ ಮೊದಲಿನ ರೀತಿಯೂ ಆಗಲು
ಮುನಿದ ಪ್ರಕೃತಿಯು ವರಬಲ ಕೊಡಲು

**ಆದಿಶ್ರೀ. ಎಸ್. ಎನ್, X C ತರಗತಿ**



# ದೂರವಾಗುವ ಸಮಯ

ನಕ್ಕು ನಲಿದಾಡಿದ ಈ ಬಯಲು
ಶಾಲೆಯೆಂಬ ದೇವಾಲಯದಿಂದ ಅಗಲುವಾಗ
ನೆನಪೊಂದೇ ಶಾಶ್ವತ

ಎಲ್ಲಿಂದಲೋ ಬಂದಾಗ ಅಪರಿಚಿತರು
ಈಗ ಪರಿಚಿತರಾಗಿ ಹೋಗುವಾಗ
ನೆನಪೊಂದೇ ಶಾಶ್ವತ

ಕೂಡಿ ಆಡಿದ ದಿನಗಳು
ಜಗಳ ಮಾಡಿದ ಘಟನೆಗಳು
ಈಗಲೂ ಮನದಂಚಿನಲ್ಲಿ ಕಣ್ಮರೆಯಾಗುತ್ತಿದೆ ನೆನಪೊಂದೇ ಶಾಶ್ವತ

ಅಗಲುತ್ತಿದ್ದೇವೆ ಅನಿವಾರ್ಯವಾಗಿ
ಮುಂದಿನ ಬಾಳಿಗೆ ಬೇಕಾಗಿ
ಎಲ್ಲವೂ ನಶ್ವರ ನೆನಪೊಂದೇ ಶಾಶ್ವತ

**ಆದಿಶ್ರೀ. ಎಸ್. ಎನ್, X C ತರಗತಿ**



## ವಿಸ್ಮಯ

ಕರ್ಮವ ಮಾಡುವ
ಬದುಕುವ ಜನರಿಗೆ
ಬೆಲೆಯನು ಕೊಡುವುದು
ನಾ ಕಾಣೆ...
ಒಳಿತನು ಮಾಡುತ
ಪರರನು ನಿಂದಿಸು
ಗೌರವ ಪಡೆವು
ನಾ ಕಾಣ್ಣೇ...
ಹಗಲಲಿ ಚಕೋರನು
ಸೂರ್ಯನ ಕಿರಣವ
ಹೀರುವ ಸಂತಸ
ನಾ ಕಾಣೆ...
ಕಾಣೆಯ ಮನೆಯೊಳು
ಮೊಟ್ಟೆಯನಿಕ್ಕುತ
ಹಾಡಿಂದ ಹೊಗಳಿಸೋ
ನಾ ಕಾಣ್ಣೇ...

ಗೀತಾಂಜಲಿ, X A

# ಜೀವನದ ಬೆಳಕು

ಕತ್ತಲೆಯ ಹಾದಿಯ ಬೆಳಗುವ ಬೆಳಕು
ಜೀವನದಲ್ಲಿ ಎಂದು ಬೆಳಗುವುದು
ಕಷ್ಟವೆಂಬ ಕತ್ತಲೆಯ ಓಡಿಸಲು
ಮನ ಬೆಳಕ ಕಾಣುವುದು

ಕತ್ತಲೆ ಎಂಬುದು ಮನದೊಳಗೆ
ಬೆಳಕು ಎಂಬುದು ಜಗದೊಳಗೆ
ಕತ್ತಲೆಯ ಪರದೆ ಸರಿಸಿ
ಬೆಳಕ ಹಂಚು ನೋವ ಮರೆಸಿ

ನೀ ಜೀವನದಲ್ಲಿ ಬೆಳಕನ್ನು
ಕಾಣಗಬೇಕಾದರೆ
ಇತರರ ನೋವ ಮರೆಸಿ
ನಿನ್ನ ನೋವ ಮರೆ


ನಿನ್ನ ಹಾಗೂ ಇತರರ
ಕತ್ತಲೆಯ ಹೆದರಿಸು
ಜೀವನದಲಿ ಎಲ್ಲರ ಬಾಳಲಿ
ಬೆಳಕನು ಕುದುರಿಸು

**ವೈಶಾಲಿ .ಎಮ್ .ಶೆಟ್ಟಿ, IX B**

# ಆರೋಗ್ಯ



ಆರೋಗ್ಯ ಎಂಬುದು ಪ್ರತಿಯೊಂದು ಜೀವಿಗೂ ಅತಿ ಅಗತ್ಯವಾಗಿದೆ. ಆರೋಗ್ಯ ಇದ್ದರೆ ಮಾತ್ರ ಮನುಷ್ಯರಲ್ಲಿ ಪ್ರಚೋದನಗೆ ತಕ್ಕಂತೆ ಪ್ರತಿಕ್ರಿಯಿಸಲು ಸಾಧ್ಯ.. ಜೀವವಿರುವ ಜೀವಿಯೂ ದೈಹಿಕವಾಗಿಯೂ ಮಾನಸಿಕವಾಗಿಯೂ ಸಾಮಾಜಿಕವಾಗಿಯೂ ಇದ್ದರೆ ಅದು ಖಂಡಿತ ಆರೋಗ್ಯ. ಏನೇ ಕೆಲಸ ಮಾಡಲು ಆರೋಗ್ಯ ಇರಬೇಕು. ಆರೋಗ್ಯ ಇರಬೇಕಾದರೆ ಒಳ್ಳೆಯ ಪೋಷಕಾಂಶಯುಕ್ತವಾದ ಆಹಾರ ಬೇಕು. ರೋಗ ಬಾರದಂತೆ ಎಚ್ಚರಿಕೆ ವಹಿಸಬೋಕು.



ಶರೀರದ ಯಾವುದೇ ಅಂಗಾಂಶಕ್ಕೆ ಕಾಯಿಲೆ ಉಂಟಾದರೆ ಶರೀರದಲ್ಲಿ ಪ್ರಚೋದನೆಗೆ ತಕ್ಕ ಪ್ರತಿತಕ್ರಿಯಿಸಲು ಸಾಧ್ಯವಿಲ್ಲ. ಶರೀರದಲ್ಲಿ ರೋಗವಿಲ್ಲದ ಉತ್ತಮವಾದ ಜೀವಿಗೆ ಆರೋಗ್ಯ ಇದೆ ಎಂದು ಹೇಳಬಹುದು. ಆರೋಗ್ಯ ಹದೆಗೆಡುವುದಕ್ಕೆ ಕೆಲವು ಆಹಾರವೇ ಮೂಲ ಕಾರಣವಾಗುತ್ತದೆ.ಆದುದರಿಂದ ಆಹಾರ ಸೇವಿಸುವಾಗ ಉತ್ತಮವಾದ ಪೋಷಕಾಂಶದಿಂದ ಕೂಡಿದ ಆಹಾರವನ್ನೇ ಹೆಚ್ಚಾಗಿ ಬಳಸಬೇಕು. ಮನುಷ್ಯರಾದರೆ ಸೊಪ್ಪು ತರಕಾರಿಗಳನ್ನು ಹೆಚ್ಚಾಗಿ ಸೇವಿಸಬೇಕು. ಇದು ಮನುಷ್ಯನ ದೇಹದ ಬೆಳವಣಿಗೆಗೆ ಕಾರಣವಾಗುತ್ತದೆ. ಉದಾಹರಣೆ:ಮನುಷ್ಯರಲ್ಲಿ ಆರೋಗ್ಯದ ಜೊತೆಗೆ ವ್ಯಾಯಾಮ, ಒಳ್ಳೆಯ ಗುಣ ನಡತೆ ಸ್ವಭಾವವಿದ್ದರೆ ಆತ ಉತ್ತಮ ಆರೋಗ್ಯವಂತ ವ್ಯಕ್ತಿ ಎನ್ನುವುದರಲ್ಲಿ ಎರಡುಮಾತಿಲ್ಲ.

**ದೀಕ್ಷಿತ .ಡಿ. ಎನ್, IX D**

# പ്രളയം

വാരുറ്റ പുഞ്ചിരി ചുണ്ടിലെപ്പോഴും
വാനിൽ മുട്ടുവോളം നിൽക്കവേ
തലയെത്തി നിന്ന കേരളം
ഇന്നിതാ ജലത്തിനടിയിൽ മുങ്ങി താന്നു

കേരളഭാരതസീമകളിൽനിന്ന് നമ്മുടെ
ഭാരതമക്കൾയെത്തി നമ്മുക്കായി
സഹായത്തിനായി സമാധാനത്തിനായി
സൈനികരെത്തി നൊടിയിടയിൽ

മായാതെ നിൽക്കുന്നു കൺമുമ്പിലിപ്പോഴും
മഴയിൽ മുങ്ങിയ കേരളം
സഹായത്തിന്റെ ആദർശ ദീപ്തിയാ
ലാർക്കുമാര്യധരായ് തീർന്ന മുക്കുവൻമാരെയോർമ്മിക്കുവിന്

എത്രപെരെത്രയുടെ ജീവിതം രക്ഷിച്ചു
ധീരൻന്മാരായ മുക്കുവൻന്മാര്
ശാന്തരായി സൗമ്യരായി പാരം വിനിതരായി
സേവനം ചെയ്ത നിങ്ങൾക്ക് വന്ദനം

പ്രളയകെടുത്തിയിൽയുള്ളവർക്കായി മനംമുരികി
പ്രർത്ഥിക്കമെന്നുമെന്നും
പ്രളയപീടിതർക്കായി ഉരുങ്ങിയെരിയും
മെഴുതിരിപോൾ സേവനമനുഷ്ഠിക്കം

**റ്റിസ്സാ എലിസബത്ത് റ്റി.ജെ.**



# FRIEND

A good friend
Can never buy in rent
Friends are not hearts calculation
They are hearts solution
A good friend scolds like a father
Cares like a mother
Iritate like a sister
and teases like a brother
Friend are miracle
they always in our heart
and takes us into careful world
“Don’t break friendship
After understanding
don’t do friends
before understanding”

**Jobina Mariyatt, X A**

# FESTIVAL

The happiest day have been arrived,
From heart fun and excitement have derived.
Although the happiness of festival,
keeps my heart Marvell.

Merry making and shouting all the day,
laughing and shouting all the day,
everyone is happy and no sorrow lingers still,
looking at happy faces,I feel thrill.

Festivals are like the cool breeze,
the cast ,colour all freeze.
Festival makes something to spring in society,
that is love, charity and unity.

People shares happiness and gives gift to each other,
about life and money, they don't bother.
Festival pours happiness to everyone's life,
whether they are son, mother or wife.

Festival is the most beautiful day,
wonderful and auspicious day, I say.
It makes us to feel that something had started in our soul,
when we think of festival ball.

If we celebrate festival at morning,
the flower's fragrance make us feel that they are welcoming.
Late evening if we celebrate festival,
the birds,breeze,bid farewell.

Every one waits and wish for that moment,
because for them festival is an excitement.
It is a bond of love,
also it is a peaceful flying dove.

Festival makes everyone joy,
at festival we cannot hear cry.
Thank god for that beautiful moment,
where everyone experienced joy.

**ELNA CHRISTINA T.J, VII B**



## MOTHER CALL

It was pleasant morning. Arun is busy playing video games. His mother is cleaning the house. He was very interested and he didn't even bothered about his mother. She called him to help in her work. Arun ignores it and continues his play. His mother had some asthma problems and doctor advised her not to do much work. If she does , she has to take medicines. After doing works she felt uncomfortable. She called arun and said “Arun, please bring my medicine from the room”. He was a very lazy boy and he didn't heed his mother's word and continues his play. His mother calls him again but he ignores. After every call , her stage is towards the critical. After a deep silence, arun didn't hear his mother's calls. He saw his mother was lying in the floor. He went near his mother and calls her many times. After some time, he calls his neighbours and also his father.


Arun explains every one what happened to his mother, everyone complains his father that because of arun ha lost his beloved wife. Arun again calls his mother. His father was filled with grief. He tells arun that “my son if you have given your mother her medicine , she need not go to the other world for her medicine. She have been still alive. Because of your laziness and your video games, you  lost your mother”. Suddenly arun became shocked . He travels to the world where his mother was alive and was with him. When he was small , his mother struggled to give him anything that he wished for. After a short while, he travels back to the world without his mother , he cries loudly, even loudly and loudly. Suddenly he hears the sound of his mother . “Mother calls” he whispered and he was awakened from a deep sleep and from the world where his mother was not there.

He becomes happy that it was not a reality and it was the only which thought  him a lesson . He becomes happy by seeing his mother and he hugs her and kisses her . On that day he decided i will not be a lazy boy any more. His mother asks him “what happened my dear child?”. Arun answers “MOTHER CALLS”.


**FATHIMATH SUMAYYA, VIIITH B**


# ಬಣ್ಣ...












thank you